22) ಗೋಮಾಳ ಜಮೀನನ್ನು ಮಂಜೂರು ಮಾಡುವ ಕುರಿತು.

+ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ); ಸಂ: ಆರ್ ಡಿ 23 ಎಲ್‌ಜಿಪಿ 99, ದಿ: 23.5.99 ಸುತ್ತೋಲೆ ಪ್ರಕಾರ ಗೋಮಾಳ ಜಮೀನುಗಳನ್ನು ಮಂಜೂರು ಮಾಡುವ ಬಗ್ಗೆ. ಸರ್ಕಾರಿ ಗೋಮಾಳ ಜಮೀನುಗಳು ದಿನೇದಿನೇ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ, ಸಧ್ಯದಲ್ಲಿ ಅಂಥ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿಯೂ ಮಂಜೂರು ಮಾಡಬಾರದೆಂದು ಸರ್ಕಾರವು ಉದ್ದೇಶಿಸಿದೆ. ಈ ಸಂಬಂಧ ಸರ್ಕಾರ ಮುಂದಿನ ಸೂಚನೆ ಅಥವಾ ನಿರ್ದೇಶನಗಳನ್ನು ನೀಡುವತನಕ ಯಾವುದೇ ಗೋಮಾಳ ಜಮೀನುಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಪ್ರಸ್ತಾವನೆಗಳನ್ನು ಕಳುಹಿಸಬಾರದೆಂದು ಈ ಮೂಲಕ ಕಂದಾಯ ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಹಾಲಿ ಕಂದಾಯ ಅಧಿಕಾರಿಗಳ ಬಳಿ ಬಾಕಿ ಇರುವ ಪ್ರಸ್ತಾವನೆಗಳಿಗೆ ಸಂಬಂಧಿಸಿದ, ಅರ್ಜಿ ಸಲ್ಲಿಸಿದ ವ್ಯಕ್ತಿಗಳಿಗೆ ಅವರವರ ಹಂತದಲ್ಲಿಯೇ ಸೂಕ್ತ ಹಿಂಬರಹ ನೀಡಲು ಸಹ ತಿಳಿಸಲಾಗಿದೆ. ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ದೇಶಿಸಲಾಗಿದೆ. ಸಹಿ. ಬಿ.ಪುಟ್ಟಣ್ಣ, ಸರ್ಕಾರದ ಅಧೀನ ಕಾರ್ಯದರ್ಶಿ. Can a bloddy under secretary send this circular without the knowledge of the secretary, or the Minister or the government? ಇವರೇನು ಕಳುಹಿಸುತ್ತಾರೆನ್ನುವುದು ಮುಖ್ಯವಲ್ಲ. ಈ ಸದನದಲ್ಲಿ ಪ್ರಿವಿಲೇಜ್ ಅಲ್ಲ, Contempt of the house ಈ ಸದನದಲ್ಲಿ, ಯಾರ್ಯಾರು ಅಕ್ರಮ ಸಾಗುವಳಿ ಮಾಡುತ್ತಿದ್ದಾರೆಯೋ, ಅದನ್ನು ಸಕ್ರಮಗೊಳಿಸಬೇಕು, ಅವರಿಗೆ ಕೊಟ್ಟಿರುವ ಕಾಲಾವಕಾಶ ಸಾಕಾಗುತ್ತಿಲ್ಲ ಎಂದು ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಒಂದು ತಿದ್ದುಪಡಿ ತಂದೆವು. ಅದನ್ನು ಎರಡೂ ಸದನಗಳಲ್ಲಿ ಪಾಸ್ ಮಾಡಿ, ರಾಜ್ಯಪಾಲರು ತಮ್ಮ ಅನುಮೋದನೆ ಸಹ ನೀಡಿದರು. ನೋಡಿ ಅದು ಇಲ್ಲಿದೆ. ಈ ಸದನಗಳು ಏಕಿರಬೇಕು. ಸಾರ್ವಭೌಮತ್ವ ಪಡೆದಿರುವ ಈ ಸದನ ಮಾಡಿದ ಒಂದು ನಿರ್ಣಯವನ್ನು, ಅದಕ್ಕೆ ವಿರುದ್ಧವಾಗಿ ಮಾಡುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದು? ಈ ಸರ್ಕ್ಯುಲರ್‌ಗೆ ಅರ್ಥವೇನು? ನಾವಿಲ್ಲಿ ಏನು ಪಾಸ್ ಮಾಡಿದ್ದು? ಕಾಸಿಗೆ ಕಡೆಯಾಗಿ ಹೋಯಿತು. They are taking the house for granted and for a ride. ಇಷ್ಟೊಂದು ಬೇಜವಾಬ್ದಾರಿಯಾದರೆ, ನಾವು ಕಣ್ಣುಮುಚ್ಚಿ ಕೂರುವುದಕ್ಕಾಗುವುದಿಲ್ಲ. ಅಧ್ಯಕ್ಷರೆ, ನಿಮಗೆ ಕಾನ್‌ಷಿಯೆಸ್‌ನೆಸ್ ಇದೆಯೆಂದು ತಿಳಿದುಕೊಂಡಿದ್ದೇನೆ. ಸದಸ್ಯರಿಗೆ ಬಹುತೇಕವಾಗಿ ಉಪದೇಶ ಮಾಡುತ್ತಿರುತ್ತೀರಿ. ನಿಮ್ಮ ಮೇಲೆ ಒಂದೊಂದು ಸಾರಿ ಸಿಟ್ಟು ಬರುತ್ತದೆ. ಸರ್ಕಾರದವರು ಈ ರೀತಿಯಾಗಿ ಅತಿರೇಕ ಮಾಡಿದಾಗ, contempt of the house commit ಮಾಡಿದಾಗ, ಸದಸ್ಯರೆಂದರೆ ಪಂಚಾಯಿತಿ ಸದಸ್ಯರುಗಳು ಕೆಟ್ಟು ಹೋದೆವಾ? ಸರ್ಕಾರ ಹುಡುಗಾಟವಾಗಿ ತೆಗೆದುಕೊಂಡಿದೆಯೇ? ಈ ಸಭೆ ಗ್ರಾಮ

ಪಂಚಾಯಿತಿ ಸಭೆಗಿಂತ ಕೆಟ್ಟು ಹೋಯಿತೆ? ಏನಿದು? ಇದನ್ನಾರು ಬಗೆಹರಿಸುವವರು? ಇದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ನಾವು ಕಣ್ಣು ಮುಚ್ಚಿ, ನುಂಗಿಕೊಂಡು ಹೋಗುವುದಕ್ಕಾಗುವುದಿಲ್ಲ. ಈ ಸಭೆಯಲ್ಲಿರುವ ಸದಸ್ಯರು ನಾಲಾಯಕ್ಕಾದವರು ಆದರೆ, ರಾಜ್ಯಪಾಲರ ಹತ್ತಿರ ಹೋಗೋಣ, ನೀವೇ ನಾಯಕತ್ವವಹಿಸಿ, ಡಿಸಾಲ್ವ್ ಮಾಡಿ, ನಾವೆಲ್ಲಾ ಇಲ್ಲಿರುವುದಕ್ಕೆ ನಾಲಾಯಕ್, ಅರ್ಹತೆ ಇಲ್ಲ, ನಾವು ಮಾಡಿದ್ದಕ್ಕೇನೂ ಬೆಲೆ ಇಲ್ಲ, ಸರ್ಕಾರ ಆಡಿದ್ದೇ ಆಟವಾಡಿಕೊಂಡು ಹೋಗಲಿ, ಏನು ಬೇಕಾದರೂ ಸರ್ಕ್ಯುಲರ್ ಕಳುಹಿಸಲಿ, let them commit contempt of the house, ನಾವು ಸುಮ್ಮನಿರುತ್ತೇವೆ ಎಂದು ಹೇಳೋಣ. ಖರ್ಗೆಯವರೆ ನೀವೂ ಓದಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಂಬಂಧಪಟ್ಟ ಮಂತ್ರಿಗಳನ್ನು ಇಲ್ಲಿಗೆ ಕರೆಸಿ. ಅದು ಇತ್ಯರ್ಥವಾಗುವವರೆಗೂ ಬೇರೆ ವಿಷಯ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಒಂದು ಗಂಟೆ ಹಿಂದೆ, ಸದನ ಮುಂದೂಡುವ ಮೊದಲು ಈ ವಿಷಯ ಪ್ರಸ್ತಾಪವಾಗಿ, ಮಾನ್ಯ ವಿರೋಧಪಕ್ಷದ ನಾಯಕರು, ನಾವೆಲ್ಲರೂ ಸೇರಿ ಅದರ ಬಗ್ಗೆ ಚರ್ಚಿಸಿದ್ದೇವೆ. ಸ್ಪಷ್ಟವಾಗಿ ಅವರು ನಿರಾಕರಿಸಿದ್ದಾರೆ. ಸರ್ಕ್ಯುಲರ್ ಕಳುಹಿಸಿಲ್ಲವೆಂದು ಹೇಳಿದ್ದಾರೆ. ಈ ರೀತಿ ಇರುವ ಕಾರಣಕ್ಕಾಗಿ ನೀವು ಸದನವನ್ನು ಅವರು ಬರುವವರೆಗೆ ಮುಂದೂಡಿ ಇಲ್ಲ, ರೆವಿನ್ಯೂ ಮಂತ್ರಿಗಳು ಬರಲಿ.

ಶ್ರೀ ಸಿ.ಭೈರೇಗೌಡ: ಅಧ್ಯಕ್ಷರೆ, ಈ ಸದನದಲ್ಲಿ ನನ್ನ ಗಮನಕ್ಕೂ ಬಂದಿತ್ತು. ನನ್ನ ಕ್ಷೇತ್ರದಲ್ಲಿ ಕೆಲವರಿಗೆ ಮನೆ ಇಲ್ಲದಿದ್ದವರಿಗೆ ನಿವೇಶನ ಕೊಡಬೇಕೆಂದು ಹೇಳುವ ಸಂದರ್ಭದಲ್ಲಿ ನಾನು ನಮ್ಮ ಜಿಲ್ಲಾಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿದ್ದೆ. ಅವರು ನನಗೆ, ಈ ರೀತಿಯಾಗಿ ಕಂದಾಯ ಇಲಾಖೆಯಿಂದ ಸುತ್ತೋಲೆ ಬಂದಿದೆ, ಇದರ ಪ್ರಕಾರ ಕೊಡುವುದಕ್ಕಾಗುವುದಿಲ್ಲವೆಂದು ಪತ್ರ ಬರೆದರು. ಮಾನ್ಯ ಕಂದಾಯ ಸಚಿವರಿಗೆ, ಈ ರೀತಿಯಾಗಿ ಹೇಳುತ್ತಿದ್ದಾರೆಂದು ಹೇಳುವುದರ ಜೊತೆಗೆ, ಭೂ ಮಂಜೂರಾತಿ ಉಪ ನಿಯಮಗಳಿವೆ, ಅದರಲ್ಲಿ ಯಾವ್ಯಾವುದಕ್ಕೆ ಕೊಡಬೇಕೆಂದೂ ಸಹ ಇದೆ. ಇವೆಲ್ಲಾ ನಮೂದು ಮಾಡಿ ನಾನು ಪತ್ರ ಬರೆದೆ.

ಶ್ರೀ ಯು.ಆರ್.ಸಭಾಪತಿ: ಮಂತ್ರಿಗಳಾಗಿ ನೀವು ಪತ್ರ ಬರೆಯುತ್ತೇನೆಂದು ಹೇಳುತ್ತೀರಿ. ಆಗಲೇ ಅವರು ಹೇಳುವಾಗ ಹೇಳಬಹುದಾಗಿತ್ತಲ್ಲವೆ?

ಶ್ರೀ ಸಿ.ಭೈರೇಗೌಡ: ನಾನೊಬ್ಬ ಮಂತ್ರಿಯಾಗಿ, ಇಲ್ಲಿ ಯಾವ ರೀತಿ ನನ್ನ ಕರ್ತವ್ಯ ನಿರ್ವಹಿಸಬೇಕೆಂಬುದನ್ನು ಸಭಾಪತಿಯವರಿಂದಾಗಲಿ ಅಥವಾ ಇನ್ನೊಬ್ಬರಿಂದಾಗಲಿ ಹೇಳಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಯು.ಆರ್.ಸಭಾಪತಿ: ನಿಮ್ಮ ಪರಿಸ್ಥಿತಿ ಈ ತರಹ ಶೋಚನೀಯವಾಗಿದೆ.

ಇದು ಪ್ರಜಾಪ್ರಭುತ್ವದಲ್ಲಿ ದೊಡ್ಡ ದುರಂತ. ನಿಮ್ಮಂಥವರು ಈ ಅವಸ್ಥೆ ಮುಟ್ಟಿರುವುದು ದುರಂತ.

ಶ್ರೀ ಸಿ.ಬೈರೇಗೌಡ: ಬಾಯಿಗೆ ಬಂದಂತೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಾರದು.

ಅಧ್ಯಕ್ಷರು: ಇಲ್ಲ. It is a collective responsibility, he is free to reply.

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ: ಆರೀತಿ ಹೇಳುವುದು, ನೀವು ಮಂತ್ರಿಗಳು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಿಮ್ಮ ಸರ್ಕಾರ ತಾನೆ. ಅವರು ಹಾಗೆಂದು ಹೇಳಿ ಹಾಗೆ ತಪ್ಪಿಸಿಕೊಳ್ಳುವುದಕಾಗುತ್ತದೆಯೇ? ನೀವು ಬೈರೇಗೌಡರಾಗಿ ಉತ್ತರಿಸುತ್ತಿದ್ದೀರೋ ಅಥವಾ ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೀರೋ?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ನಿಮ್ಮ ಪತ್ರದಲ್ಲಿ ಪ್ರಸ್ತಾಪಮಾಡಿರತಕ್ಕಂಥ ವಿಚಾರಕ್ಕೂ ಇದಕ್ಕೂ ಸಂಬಂಧವಿಲ್ಲ, ಇವರಿಗೆ ನಿವೇಶನಗಳನ್ನು ಕೊಡುವುದಕ್ಕೆ ಯಾವುದೇ ರೀತಿಯ ಅಭ್ಯಂತರವಿಲ್ಲವೆಂದು ಮಾನ್ಯ ಮಂತ್ರಿಗಳು ನನ್ನ ಪತ್ರಕ್ಕೆ ಉತ್ತರ ಬರೆದಿದ್ದಾರೆ. ಈ ಸುತ್ತೋಲೆಯಲ್ಲಿ ಗೋಮಾಳ ಜಮೀನಿನ ಬಗ್ಗೆ ನಮೂದು ಮಾಡಲಾಗಿದೆ. ಭೂಮಿಯಲ್ಲಿ ಅನೇಕ ವಿಧವಾದ ಭೂಮಿಗಳಿವೆ, ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಜಮೀನು ಇರುತ್ತದೆ. ನನ್ನ ಸಾಮಾನ್ಯ ಜ್ಞಾನಕ್ಕೆ ತಿಳಿದಮಟ್ಟಿಗೆ ಗೋಮಾಳ ಜಮೀನೆಂದರೆ, ಇಲ್ಲಿಯವರೆಗೂ ಸಾಗುವಳಿ ಮಾಡದೆ ಇರತಕ್ಕಂಥ ಭೂಮಿ. ಒತ್ತುವರಿ ಆಗಿರತಕ್ಕಂಥ ಭೂಮಿಗೆ ಈಗ ಫಾರಂ ನಂಬರ್: 50 ಅಥವಾ ಪುನ: ಅರ್ಜಿ ಹಾಕಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆ. ಸಾಗುವಳಿ ಆಗಿರತಕ್ಕಂಥ ಭೂಮಿ, ಒತ್ತುವರಿ ಆಗಿರತಕ್ಕಂಥ ಭೂಮಿಗಳಿಗೆ ಫಾರಂ ನಂಬರ್: 50 ರಲ್ಲಿ....

ಅಧ್ಯಕ್ಷರು: ಇದು ಯಾವ ಕ್ಯಾಟಗರಿ ಲ್ಯಾಂಡ್?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಗೋಮಾಳ ಭೂಮಿಯನ್ನು ಒತ್ತುವರಿ ಮಾಡಿ ಸಾಗುವಳಿ ಮಾಡಿರುವ ಕಡೆ ಏನು ಮಾಡುತ್ತೀರಿ?

ಅಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರೆ ಹಾಗೂ ಮಾನ್ಯ ಪುಟ್ಟಣ್ಣಯ್ಯನವರೆ ನೀವಿಬ್ಬರು ಸ್ವಲ್ಪ ಸಹನೆ ಇಟ್ಟುಕೊಳ್ಳಿ. ಮೊದಲು ಸರ್ಕಾರ ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಕಂದಾಯ ಮಂತ್ರಿಗಳು ಬಂದು ಈ ವಿಷಯದ ವಾಸ್ತವಾಂಶದ ಬಗ್ಗೆ ವಿವರವಾದಂಥ ಹೇಳಿಕೆಯನ್ನು ಕೊಡುತ್ತಾರೆ. ಮಾನ್ಯ ಸದಸ್ಯರು ಓದಿದಂಥ ಸುತ್ತೋಲೆ ನನ್ನ ಹತ್ತಿರಕ್ಕೂ ಬಂದಿದೆ, ಈ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳಿಗೆ ಬರವಣಿಗೆ ಮೂಲಕ ಪತ್ರವನ್ನು ಕಳುಹಿಸಿದ್ದೆ, ಮಾನ್ಯ ಮಂತ್ರಿಗಳಿಂದ ನನ್ನ ಪತ್ರಕ್ಕೆ ಉತ್ತರ ಕೂಡ ಬಂದಿದೆ. ಈ ಎಲ್ಲಾ ಮಾಹಿತಿಗಳನ್ನು ಒದಗಿಸುವುದಕ್ಕೆ ಕಛೇರಿಗೆ ತಿಳಿಸಿದ್ದೇನೆ. ನನ್ನ ಸಾಮಾನ್ಯ ಜ್ಞಾನಕ್ಕೆ ತಿಳಿದಮಟ್ಟಿಗೆ, ಮಾನ್ಯ ಸದಸ್ಯರು ಓದಿರತಕ್ಕಂಥ ಸುತ್ತೋಲೆಗೂ ಘಾರಂ ನಂಬರ್ 50 ಹಾಕುವುದಕ್ಕೂ ಸಂಬಂಧ ಇಲ್ಲ ಎನ್ನತಕ್ಕಂಥದ್ದನ್ನು ಈಗಲೂ ಸಹ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಈ ಸುತ್ತೋಲೆಯ ಪ್ರಕಾರ ಗೋಮಾಳದ ಜಮೀನು ಬಗರ್‌ಹುಕುಂ ಅಥವಾ ಆಶ್ರಯ ನಿವೇಶನಗಳಿಗೆ ಕೊಡುವುದಕ್ಕೆ ಬರುವುದಿಲ್ಲ. ಈ ಸುತ್ತೋಲೆಯಲ್ಲಿ ಬಗರ್‌ಹುಕುಂ ಅಥವಾ ಆಶ್ರಯ ನಿವೇಶನಕ್ಕೆ ಹೊರತುಪಡಿಸಿ ಕೇವಲ ಗೋಮಾಳದ ಬಗ್ಗೆ ಎಂದು ಪ್ರಸ್ತಾಪ ಮಾಡಿದ್ದರೆ, ನಾನು ಖಂಡಿತ ನಿಮ್ಮ ಈ ಸುತ್ತೋಲೆಯನ್ನು ಒಪ್ಪುತ್ತಿದ್ದೆ.

ಶ್ರೀ ಸಿ.ಭೇರೇಗೌಡ: ನಿಯಮಗಳನ್ನು ಮತ್ತು ಮೂಲ ಕಾನೂನುಗಳನ್ನು circulars cannot over-rule the Rules or Act.

ಶ್ರೀ ಕಾಗೋಡು ತಿಮ್ಮಪ್ಪ: ಹೌದು.

ಶ್ರೀ ಸಿ.ಭೈರೇಗೌಡ: ನನ್ನ ಸಾಮಾನ್ಯ ಜ್ಞಾನಕ್ಕೆ ತಿಳಿದಮಟ್ಟಿಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಮತ್ತು ಲ್ಯಾಂಡ್ ಗ್ರ್ಯಾಂಟ್ ಆಕ್ಟ್ ಪ್ರಕಾರ ಈ ಸುತ್ತೋಲೆ ಒಳಪಟ್ಟಿದೆ. ಈ ವಿಷಯದ ಬಗ್ಗೆ ಮಾನ್ಯ ಸಚಿವರಿಂದ ವಿವರವಾದಂಥ ಹೇಳಿಕೆಯನ್ನು ಕೊಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಗೋಮಾಳ ಜಮೀನಿನಲ್ಲಿ ಆಶ್ರಯ ನಿವೇಶನಕ್ಕೆ ಮತ್ತು ಬಗರ್‌ಹುಕುಂಗೆ ಜಮೀನನ್ನು ಮಂಜೂರು ಮಾಡುವ ವಿಚಾರದಲ್ಲಿ ರಿಯಾಯಿತಿ ಇತ್ತು. ಮತ್ತು ನೀವು ಹೇಳಿದ ಪ್ರಕಾರ ಎರಡು ವಿಚಾರಕ್ಕೆ ಹೊರತುಪಡಿಸಿ ಬೇರೆ ಉದ್ದೇಶಕ್ಕೋಸ್ಕರ ಗೋಮಾಳ ಜಮೀನನ್ನು ಕೊಡುವಂಥ ಸಂದರ್ಭದಲ್ಲಿ ಈ ಬಾಧಕ ಇತ್ತು. ಆದರೆ, ಹಿಂದೆ ಬಗರ್‌ಹುಕುಂ ಸಾಗುವಳಿಗೆ ಮತ್ತು ಆಶ್ರಯ ನಿವೇಶನಕ್ಕೆ ಗೋಮಾಳ ಜಮೀನು ಕೊಡಬಹುದು, ಇರತಕ್ಕಂಥ ನಿರ್ಬಂಧ ಇದಕ್ಕೆ ಸಂಬಂಧ ಪಡುವುದಿಲ್ಲವೆಂದು ಇತ್ತು. ಆದರೆ, ಇಲ್ಲಿ ಏನಾಗಿದೆ ಎಂದರೆ, ''ನಿದ್ದೆ ಬಂದವನಿಗೆ ಹಾಸಿಗೆ ಹಾಸಿ ಕೊಟ್ಟಂತೆ ಆಯಿತು... ಈ ಸುತ್ತೋಲೆಯನ್ನು ಅಧಿಕಾರಿಗಳು ನೋಡಿದ ಕೂಡಲೇ ಬಗರ್‌ಹುಕುಂ ಮತ್ತು ಆಶ್ರಯ ನಿವೇಶನಕ್ಕೆ ರೆಕಾರ್ಡ್‌ಗಳನ್ನು ಮಾಡುವುದೇ ಇಲ್ಲ. ಈ ಸುತ್ತೋಲೆಯಲ್ಲಿ ಆಶ್ರಯ ನಿವೇಶನ ಮತ್ತು ಬಗರ್‌ಹುಕುಂ ಸಾಗುವಳಿಗೆ ಹೊರತುಪಡಿಸಿ ಎಂದು ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬೆಳಿಗ್ಗೆ ಈ ವಿಷಯ ಚರ್ಚೆ ಬಂದಾಗ ಮಾನ್ಯ ಕಂದಾಯ ಸಚಿವರು ಇಂಥ ಸುತ್ತೋಲೆಯನ್ನು ಸರ್ಕಾರದಿಂದ ಕಳುಹಿಸಿಲ್ಲವೆಂದು ಸ್ಪಷ್ಟವಾಗಿ ಈ ಸದನದಲ್ಲಿ ಹೇಳಿದ್ದಾರೆ. ಮಾನ್ಯ ಭೈರೇಗೌಡರಿಗೆ ಅನುಮಾನ ಇದ್ದರೆ ಕಡತಗಳನ್ನು ತೆಗೆಸಿ ನೋಡಲಿ. ಈ ವಿಷಯವನ್ನು ಇವತ್ತು ಎರಡು ಗಂಟೆಗಳ ಹಿಂದೆ ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಫಾರಂ ನಂಬರ್ 53 ರಲ್ಲಿ ಹಾಕುವ ವಿಚಾರದಲ್ಲಿ ಯಾವುದೇ ಕಡತವನ್ನು ತಯಾರು ಮಾಡಬಾರದೆಂದು ಸರಕಾರದಿಂದ ಸುತ್ತೋಲೆ ಹೋಗಿದೆ ಎಂದು ಮಾನ್ಯ ಆರಗ ಜ್ಞಾನೇಂದ್ರರವರು ಬೆಳಿಗ್ಗೆ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಚರ್ಚೆಯಾಗಿದೆ. ಬಗರ್‌ಹುಕುಂ ಸಾಗುವಳಿಯಲ್ಲಿ ಹಿಂದೆ ತಿಳುವಳಿಕೆ ಇಲ್ಲದೇ ಇರುವವರು ಇದಕ್ಕೆ ಅರ್ಜಿ ಹಾಕದೇ ಬಿಟ್ಟು ಹೋದಂಥವರಿಗೆ ಫಾರಂ ನಂಬರ್: 53 ನ್ನು ಹಾಕುವುದಕ್ಕೆ ಈ ಆ್ಯಕ್ಟ್ ಮುಖಾಂತರ ಅಮೆಂಡ್‌ಮೆಂಟ್ ಮಾಡಿಕೊಡಲಾಗಿದೆ. ಆದರೆ, ಇದಕ್ಕೆ ಅರ್ಜಿ ಹಾಕಿದ ಮೇಲೆ ಸರ್ಕಾರದಿಂದ ಸುತ್ತೋಲೆ ಹೋಗಿದೆ. ಈ ಸುತ್ತೋಲೆ ಪ್ರಕಾರ ಯಾವ ಕಡತವನ್ನು ತಯಾರು ಮಾಡಬಾರದೆಂದು ಪ್ರಸ್ತಾಪಮಾಡಿದಾಗ ಮಾನ್ಯ ಕಂದಾಯ ಮಂತ್ರಿಗಳು ಇಂಥ ಸುತ್ತೋಲೆಯನ್ನು ನಾವು ಕಳುಹಿಸಿಲ್ಲವೆಂದು ಸ್ಪಷ್ಟವಾಗಿ ನಿರಾಕರಣೆ ಮಾಡಿದ್ದಾರೆ. ಕಂದಾಯ ಇಲಾಖೆಯಿಂದ ಹೊರಡಿಸಿರತಕ್ಕಂಥ ಸುತ್ತೋಲೆ ಮತ್ತು ಸದನದಲ್ಲಿ ಪಾಸ್ ಮಾಡಿದಂಥ ಆ್ಯಕ್ಟ್ ಕೂಡ ಈ ಸದನದ ಮುಂದೆ ಇದೆ. ಮಾನ್ಯ ಕಂದಾಯ ಮಂತ್ರಿಗಳು ಬಂದಿದ್ದಾರೆ, ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಂದ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಕೆಲವು ವಿಷಯಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಇಂಥ ಆದೇಶವನ್ನು ಹೊರಡಿಸತಕ್ಕಂಥ ಹಿನ್ನೆಲೆ ಏನು? ಯಾವ ಉದ್ದೇಶಕ್ಕಾಗಿ ಹೊರಡಿಸಲಾಗಿದೆ? ಏಕೆಂದರೆ, ಈ ಇಲಾಖೆಯಲ್ಲಿ in between lines ಓದುವುದು ಮತ್ತು ಕನ್‌ಫ್ಯೂಷನ್ ಕ್ರಿಯೇಟ್ ಮಾಡತಕ್ಕಂಥದ್ದು misinterpretation of the notification ಇವುಗಳೆಲ್ಲಾ ಜಾಸ್ತಿ ಇರುತ್ತದೆ. Let the Government come prepared, ಇಂಥ ಉದ್ದೇಶಕ್ಕೋಸ್ಕರ ಈ ಆದೇಶವನ್ನು ಹೊರಡಿಸಿದ್ದೇವೆಂದು ಹೇಳಿ, ಇಲ್ಲದಿದ್ದರೆ ಎಂಟೈರ್ ಲ್ಯಾಂಡ್ ಗ್ರ್ಯಾಂಟ್‌ಗೆ ಮತ್ತು ಬಗರ್‌ಹುಕುಂ ಪ್ರೋಸಸ್ has come to a stand still ಮತ್ತು Ashraya Layoutಗಳನ್ನು ಹಾಗೂ ಇತರೆ ಯಾವುದೇ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ತಾವು ಸುಮ್ಮನೆ ಆದೇಶದ ಮೇಲೆ ಆದೇಶಗಳನ್ನು ಹೊರಡಿಸುತ್ತಿರುವುದರಿಂದ you are keeping the public and the officials also in confusion. ಇದು ಡಿ.ಸಿ.ಯವರಿಗೆ ಬಂದು ನಂತರ ತಹಸೀಲ್ದಾರ್ ಮೂಲಕ ರೆವಿನ್ಯೂ ಇನ್ಸ್‌ಪೆಕ್ಟರ್ ಹತ್ತಿರ ಬರುವ ಹೊತ್ತಿಗೆ ಸುಮಾರು

ಒಂದು ತಿಂಗಳಾಗುತ್ತದೆ. ಇದರಿಂದ ಜನರು ಕನ್‌ಫ್ಯೂಷನ್ ಮಾಡಿಕೊಂಡರೆ ಯಾವುದೇ ಕೆಲಸವೂ ಆಗುವುದಿಲ್ಲ. Before issuing such orders, the government should confirm for what purpose they are issuing the orders.

+ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿ): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಅನಾವಶ್ಯಕವಾಗಿ ಗೊಂದಲವನ್ನು ಸೃಷ್ಟಿಮಾಡುವುದು ಸರಿಯಲ್ಲ. ಮಾನ್ಯ ಮುದ್ದಹನುಮೇಗೌಡರು ಪ್ರಸ್ತಾಪ ಮಾಡಿರತಕ್ಕಂಥದ್ದನ್ನು ನಾನು ಮೆಚ್ಚುತ್ತೇನೆ. ಸರ್ಕಾರ ಬಡವರಿಗೋಸ್ಕರ ಏನಾದರೊಂದು ಕಾನೂನುಗಳನ್ನು ತಂದರೆ ಇದನ್ನು ಮಿಸ್ ಇಂಟರ್‌ಪ್ರಿಟ್ ಮಾಡತಕ್ಕಂಥ ಅಧಿಕಾರಿಗಳಿದ್ದಾರೆ. ಇದು ಸರಿಯಾಗಿ ಪ್ರಚಾರ ಆಗದೇ ಇರತಕ್ಕಂತಹ ಸಂದರ್ಭಗಳು ಸಹ ಇವೆ. ಮತ್ತು ಸರ್ಕಾರ ಕೊಡತಕ್ಕಂಥ ನಿರ್ದೇಶನಗಳನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳದೇ ಇರತಕ್ಕಂಥ ಸಂದರ್ಭಗಳು ಇವೆ ಹಾಗೂ ಸರಿಯಾಗಿ ಆ್ಯಕ್ಟ್, ರೂಲ್‌ಗಳನ್ನು ಓದದೆ ಇರತಕ್ಕಂಥ ವಿಚಾರಗಳೂ ಕೂಡ ಇವೆ. ಸೆಕ್ಷನ್ 94 ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ತಿದ್ದುಪಡಿಯನ್ನು ತಂದು ಸೆಕ್ಷನ್ 94 ಎ ಇರುವುದನ್ನು 94 ಬಿ ಎಂದು ಮಾಡಿ 91 ರ ನಂತರ ಅರ್ಜಿ ಹಾಕುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟು ಆದಷ್ಟು ಶೀಘ್ರವಾಗಿ ಮಾಡಬೇಕೆಂದು ಇದನ್ನು ಮಾಡಲಾಗಿದೆ ಎಂದು ಇವತ್ತು ಬೆಳಿಗ್ಗೆ ತಾನೇ ಹೇಳಿದ್ದೇನೆ. ಇದರಲ್ಲಿ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ ಸ್ಪಷ್ಟವಾಗಿರುವುದು ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಸಹ ಗೊತ್ತಿದೆ. ಬಗರ್‌ಹುಕುಂ ಸಾಗುವಳಿದಾರರು ಮತ್ತು ಇತರರಿಗೂ ಸಹ ಗೋಮಾಳ ಲ್ಯಾಂಡ್‌ನಲ್ಲಿ ಮಾಡಬಹುದು. ಗೋಮಾಳ ಮತ್ತು ಖರಾಬ್ ಲ್ಯಾಂಡ್ ಅಥವಾ ಟ್ಯಾಂಕ್ ಬೆಡ್ ಜಮೀನುಗಳನ್ನು ಖಾಸಗಿ ವ್ಯಕ್ತಿಗಳಿಗೆ ಅಥವಾ ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಬಾರದೆಂದು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಿಂದ ಒಂದು ನಿರ್ದೇಶನ ಇದೆ. ಈ ನಿರ್ದೇಶನವನ್ನು ಪಾಲನೆ ಮಾಡಬೇಕೆಂಬ ದೃಷ್ಟಿಯಿಂದ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ. ಗೋಮಾಳ ಲ್ಯಾಂಡ್‌ನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡತಕ್ಕಂಥವರ ಅರ್ಜಿಗಳನ್ನು ವಿಲೇವಾರಿ ಮಾಡಬಾರದೆಂದು ಇದರಲ್ಲಿ ಇಲ್ಲ. ಈ ವಿಷಯದ ಬಗ್ಗೆ ಅನಾವಶ್ಯಕ ಗೊಂದಲ ಸೃಷ್ಟಿಯಾಗಿದೆ ಎಂದು ಮಾನ್ಯ ಕೃಷಿ ಸಚಿವರು ನನಗೆ ಪತ್ರ ಬರೆದಿದ್ದರು. ಕೆಲವು ಅಧಿಕಾರಿಗಳು ಬಡವರಿಗೆ ಸಹಾಯ ಮಾಡಬೇಕಾದಂಥ ಸಂದರ್ಭದಲ್ಲಿ ಇಂಥ ಸುತ್ತೋಲೆಗಳನ್ನು ಸರಿಯಾಗಿ ನೋಡುವುದೇ ಇಲ್ಲ. ಇದಕ್ಕಾಗಿ 14 ನೇ ತಾರೀಖು ಸರ್ಕಾರದಿಂದ ಒಂದು ಸ್ಪಷ್ಟೀಕರಣ ಕೊಡಲಾಗಿದೆ. ಅದೇನೆಂದರೆ, ದಿನಾಂಕ: 14-6-1999, ಕರ್ನಾಟಕ ಭೂ ಕಂದಾಯ ಕಾಯಿದೆ 64, ಕಲಂ 94ಕ್ಕೆ ತಿದ್ದುಪಡಿ ಮಾಡಿ ಕಲಂ 94 ಬಿ ಯನ್ನು ಹೊಸದಾಗಿ ಸೇರ್ಪಡೆ ಮಾಡಿರುವುದು ಸರಿಯಷ್ಟೆ. ಈ ರೀತಿ ಸೇರ್ಪಡೆ ಮಾಡುವ ಮೊದಲು ಬಗರ್‌ಹುಕುಂ ಸಾಗುವಳಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು

ನಿಯಮಗಳಲ್ಲಿ ಅವಕಾಶ ನೀಡಲಾಗಿತ್ತು. ಅಲ್ಲದೇ ಇಂಥ ಪ್ರಕರಣಗಳನ್ನು ಸ್ವಯಂ ಪ್ರೇರಣೆಯಿಂದ ಗುರುತಿಸಲು ಜಿಲ್ಲಾಧಿಕಾರಿಗಳಿಗೆ ಅವಶ್ಯಕ ಕ್ರಮವನ್ನು ಕೈಗೊಳ್ಳಲು ಕಾಯಿದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ನಿಗದಿತ ಅವಧಿಯೊಳಗೆ ಸ್ವೀಕೃತವಾದಂಥ ಅರ್ಜಿಗಳನ್ನು ಹಾಗೂ ಮಾಹಿತಿಗಳನ್ನು ಈ ಕೂಡಲೇ ಒದಗಿಸಿಕೊಡಬೇಕೆಂದು ಸೂಚಿಸಲಾಗಿದೆ. ಈ ತಿದ್ದುಪಡಿಗೆ ಸಾಕಷ್ಟು ಪ್ರಚಾರ ಸಿಗದೆ ಹೋದದ್ದು ಮತ್ತು ರೈತರ ನಿರ್ಲಕ್ಷತೆ ಇನ್ನು ಅನೇಕ ಪ್ರಕರಣದಿಂದ ಇಂತಹ ಪ್ರಕರಣಗಳು ಉಳಿದಿದ್ದರೂ ಉಳಿದಿರಬಹುದು. ಈ ಅಂಶಗಳನ್ನು ಪರಿಗಣಿಸಿ ಕೊನೆಯದಾಗಿ ಇನ್ನೊಂದು ಹಂತದ ಸ್ವಯಂಪ್ರೇರಿತ ಕಾರ್ಯವನ್ನು ಗುರುತಿಸಿ ಕಾರ್ಯವನ್ನು ಎಲ್ಲ ತಾಲ್ಲೂಕುಗಳಿಗೆ ಹಮ್ಮಿಕೊಳ್ಳಲು ಸರ್ಕಾರ ಉದ್ದೇಶಿಸಿದೆ. ಈ ರೀತಿ ಗುರುತಿಸಿದ ಕಾರ್ಯವನ್ನು ಒಂದು ತಿಂಗಳೊಳಗೆ ಅಂದರೆ, 15ನೇ ಜೂನ್ 1999 ರಿಂದ 15ನೇ ಜುಲೈ 1999ರವರೆಗೆ ಅರ್ಥಪೂರ್ಣವಾಗಿ ನಡೆಸಿ ಆಯಾಯಾ ತಾಲ್ಲೂಕುಗಳಲ್ಲಿ ಇಂತಹ ಪ್ರಕರಣಗಳು ಇಲ್ಲವೆಂಬ ಬಗ್ಗೆ ಜಿಲ್ಲಾಧಿಕಾರಿಗಳು ಧೃಡಪಡಿಸಿಕೊಂಡು ಸರ್ಕಾರಕ್ಕೆ ಪ್ರಾಮಾಣಿಕವಾದ ವರದಿಯನ್ನು ಸಲ್ಲಿಸಲು ನಿರ್ದೇಶಿಸಿದೆ. ಆದ್ದರಿಂದ ಇಂತಹ ಪ್ರಕರಣಗಳನ್ನು ಸ್ವಯಂಪ್ರೇರಿತವಾಗಿ ಗುರುತಿಸಿ ಎಲ್ಲ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಇನ್ನೊಂದು ಕಾರ್ಯಾಗಾರವನ್ನು ನಡೆಸುವ ಮೂಲಕ ಮುಂದಿನ ಅವಶ್ಯಕತೆಗೆ ಸಲ್ಲಿಸುವುದು. 14-6-99ರಂದು ನನಗೆ ಕೃಷಿ ಇಲಾಖೆಯ ಸಚಿವರು ಪತ್ರವನ್ನು ಬರೆದು, ಇದರಲ್ಲಿ ಸ್ವಲ್ಪ ಗೊಂದಲ ಇರುವುದರಿಂದ ನೀವು ಸ್ಪಷ್ಟೀಕರಣ ನೀಡಬೇಕೆಂದು ಹೇಳಿದರು. ನಾನು ತಕ್ಷಣ ಜಿಲ್ಲಾಧಿಕಾರಿಗಳಿಗೆ ಹಾಗೂ ತಾಲ್ಲೂಕಾ ಕಛೇರಿಗಳಿಗೆ ಸ್ಪಷ್ಟೀಕರಣವನ್ನು ನೀಡಿದ್ದೇನೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಗೋಮಾಳ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರೆ, ಅದರ ಕಡತವನ್ನು ತಯಾರು ಮಾಡಿ ಅವರಿಗೆ ಮಂಜೂರು ಮಾಡಬೇಕು ಎನ್ನುವ ಸೂಚನೆಯನ್ನು ಕೊಟ್ಟಿದ್ದೇವೆ. ಇದರಲ್ಲಿ ಎರಡು ಉದ್ದೇಶಕ್ಕೆ ಅವಕಾಶ ಇರುತ್ತದೆ. ಒಂದನೆಯದಾಗಿ ಎಸ್‌ಸಿ: ಎಸ್‌ಟಿಯವರಿಗೆ ಜಮೀನು ಮಂಜೂರು ಮಾಡಬೇಕು, ನಿವೇಶನಕ್ಕಾಗಿ ಕೊಡತಕ್ಕಂಥ ಈ ಗೋಮಾಳ ಜಮೀನನ್ನು ಕಡಿಮೆ ಮಾಡುವುತಕ್ಕೆ ನಮ್ಮ ಸರ್ಕಾರಕ್ಕೆ ಅಧಿಕಾರ ಇದೆ. ಅದನ್ನು ಬಿಟ್ಟರೆ ಬೇರೆ ಯಾವ ಉದ್ದೇಶಕ್ಕೂ ಗೋಮಾಳ ಜಮೀನನ್ನು ಮಂಜೂರು ಮಾಡುವುದಕ್ಕೆ ಅವಕಾಶವಿಲ್ಲ. ಬಗರ್ ಹುಕುಂ ಸಾಗುವಳಿಗಾಗಿ ಗೋಮಾಳ ಜಮೀನನ್ನು ಮಂಜೂರು ಮಾಡುವುದಕ್ಕೆ ಈ ಹಿಂದೆ 1994ರಲ್ಲಿ ಅವಕಾಶ ಕೊಟ್ಟಿದೆ. ಆದ್ದರಿಂದ ಇದು ಸ್ಪಷ್ಟವಾಗಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಈ ಸದನದ ಮುಂಖಾಂತರ ನಾನು ಎಲ್ಲ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಈ ಕಾರ್ಯಕ್ರಮವನ್ನು ಜಾಗ್ರತೆಯಿಂದ ಮಾಡಬೇಕೆಂದು ಸೂಚಿಸುತ್ತೇನೆ.

+ಶ್ರೀ ಜಿ.ವಿ.ಶ್ರೀರಾಮರೆಡ್ಡಿ: 23-3-99ರಂದು ಈ ಸರ್ಕ್ಯುಲರ್ ಇಷ್ಯೂ

ಆಗಿರುವಂತದ್ದು, ಅದರಲ್ಲಿ ಬಹಳ ಸ್ಪಷ್ಟವಾಗಿ ಬರೆದಿದ್ದಾರೆ. ಸರ್ಕಾರದ ಗೋಮಾಳ ಜಮೀನುಗಳು ದಿನೇ ದಿನೇ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಅಂತಹ ಜಮೀನುಗಳನ್ನು ಯಾವ ಉದ್ದೇಶಕ್ಕೂ ಮಂಜೂರು ಮಾಡಬಾರದೆಂದು ಸರ್ಕಾರ ಉದ್ದೇಶಿಸಿದೆ. ಈ ಸಂಬಂಧವಾಗಿ ಮುಂದಿನ ಸೂಚನೆ ಹಾಗೂ ನಿರ್ದೇಶನವನ್ನು ನೀಡುವ ತನಕ ಯಾವುದೇ ಗೋಮಾಳ ಜಮೀನನ್ನು ಮಂಜೂರು ಮಾಡಬಾರದೆಂದು ಹಾಗೂ ಸರ್ಕಾರದ ಪ್ರಸ್ತಾವನೆಗಳನ್ನು ಸಲ್ಲಿಸಬಾರದೆಂದು ಈ ಮೂಲಕ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಂಬಂಧಪಟ್ಟ ಕಂದಾಯ ಅಧಿಕಾರಿಗಳ ಬಳಿ ಬಾಕಿ ಇರುವ ಪ್ರಸ್ತಾವನೆಗಳಿಗೆ ಸಂಬಂಧಪಟ್ಟ ಅರ್ಜಿದಾರರಿಗೆ ಅವರಿಗೆ ಸೂಕ್ತ ಹಿಂಬರಹವನ್ನು ನೀಡಲು ಸಹ ಸೂಚಿಸಲಾಗಿದೆ. ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ದೇಶಿಸಲಾಗಿದೆ. ಇದರ ಅರ್ಥ ಏನು? ಸದನ 94ಬಿ ಏನು ಆ್ಯಕ್ಟ್ ಮಾಡಿದೆ ನಾನು ಅದನ್ನು ಓದಿ ಬಿಡುತ್ತೇನೆ.

"Section-94B: Notwithstanding anything contained in this Act, if the Deputy Commissioner or other officer authorised by the state government in this behalf has sustained after holding such a enquiry as he deems fit that a person has prior to 14th day April 1990 unauthorisedly occupied any land including land referred to in Sub-section 2 of section 79 from which he is liable to be evicted under section 94"and

Second:

"being eligible to grant of such a land under section 94A has failed to apply for such a grant under sub-section 4of the said section within a period specified therein, provided that nothing in this clause shall apply to a person who has become eligible for grant of land by virtue of the karnataka land Revenue Amendment Act of 1997 has continued to be in actual possession of such a land on the date of commencement of the karnataka land Revenue amended Act of 1997. "

This is the Act and this is the circular issued. This is what the Hon'ble Minister has shown. The only

question before the House is, whether this Act is having any sanctity which has been passed by this House unanimously to help the poor, to help the needy and to help the innocent people who have failed to apply? whether this circular is not contradicting this Act? whether, as he told this morning in this House, we have not sent any circular to government officers as such to stop? These three questions have to be answered and decided by the minister.

ಶ್ರೀ ಬಿ.ಸೋಮಶೇಖರ: ಸಭಾಧ್ಯಕ್ಷರೆ, it is a common knowledge that provisions of the Act prevails over all the circulars. ಆ್ಯಕ್ಟ್‌ನಲ್ಲಿ ಏನು ಪ್ರಾವಿಜನ್ ಇದೆ, ಅದನ್ನು ಮಾಡಬೇಡಿ ಎಂದು ಎಲ್ಲೂ ಹೇಳಿಲ್ಲ. ಸರ್ಕಾರದಲ್ಲಿ ಯಾವುದೇ ಗೊಂದಲದ ಸರ್ಕ್ಯುಲರ್ ಇದ್ದರೂ ಕೂಡ the Act is supreme. ಆ್ಯಕ್ಟ್‌ನಲ್ಲಿ ಪಾಸಾಗಿರತಕ್ಕಂಥದ್ದನ್ನು ಅವರು ಮಾಡಬೇಕು. ಅದನ್ನು ಬಿಟ್ಟು ಬೇರೆ ಯಾವುದಕ್ಕಾದರೂ ಮಂಜೂರಾತಿ ಮಾಡಬಾರದೆಂದು ಹೇಳಿದ್ದೇವೆ ಹೊರತು ಅದನ್ನು ಬೇರೆ ರೀತಿ ಇಂಟರ್‌ಪ್ರಿಟ್ ಮಾಡಬಾರದು. ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ, ಆ್ಯಕ್ಟ್‌ನ್ನು ನಾವೇ ತಂದಿರತಕ್ಕಂಥದ್ದು, 1991ರಿಂದ ಬಾಕಿ ಇತ್ತು, ಬಡವರಿಗೆ ಅವಕಾಶ ಕೊಡಬೇಕೆಂದು ಇದನ್ನು ತಂದಿದ್ದೇವೆ. ಯಾವುದೇ ಒಂದು ಸರ್ಕ್ಯುಲರ್‌ನ್ನು ಗೊಂದಲವಾಗಿ ಮಾಡಿಕೊಂಡಿದ್ದರೆ ಅದು ಅಧಿಕಾರಿಗಳ ತಪ್ಪು. ಆ ರೀತಿ ಆಗಬಾರದೆಂದು ಈ ಸದನ ಸೇರುವ ಮುಂಚೆ 14 ನೇ ದಿನಾಂಕದಂದು ಸೂಚನೆಯನ್ನು ಕೊಟ್ಟಿದ್ದೇವೆ. ಇನ್ನು ಸ್ಪಷ್ಟವಾಗಿ ಹೇಳುತ್ತೇನೆ, ಯಾವುದೇ ಗೊಂದಲ ಇರಬಾರದು. ಆ್ಯಕ್ಟ್ 94 ಬಿ ಪ್ರಕಾರ ಗೋಮಾಳ ಜಮೀನಿನ ಬಗ್ಗೆ ಕಡತ ತಯಾರಾಗಿದ್ದರೆ ಅಂತಹವರಿಗೆ ಜಮೀನು ಮಂಜೂರಾತಿ ಮಾಡಬೇಕೆಂದು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸಚಿವರು ವಿವರಣೆ ನೀಡಿರುವುದರಲ್ಲಿ ಬಹಳ ಸ್ಪಷ್ಟವಾಗಿದೆ ಯಾವುದೇ ಸಂಶಯವನ್ನು ಪಡುವುದಕ್ಕೆ ಹೋಗುವುದಿಲ್ಲ. ಉಳಿದಿರತಕ್ಕಂಥ ಅಲ್ಪ ಸ್ವಲ್ಪ ಗೋಮಾಳ ಜಮೀನನ್ನು ನಾವು ಉಳಿಸಿಕೊಳ್ಳಲೇಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದನ್ನು ಡೈವರ್ಟ್ ಮಾಡುವುದು ಬೇಡ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಗೋಮಾಳ ಜಮೀನು ಪೂರ್ಣ ಪ್ರಮಾಣದಲ್ಲಿ ನಾಶವಾಗುವುದಕ್ಕೆ ಯಾರು ಕಾರಣ? ಗೋಮಾಳ ಜಮೀನನ್ನು ಕೊಡಬೇಕೆನ್ನುವ ತೀರ್ಮಾನವೇ ಇದಕ್ಕೆ ಕಾರಣ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ಕಾರಣ. ನೀವು ಕಾರಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನೀವು ಕಾರಣ ಇರಬಹುದು, ನಾವು ಕಾರಣ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಹೌದು, ನಾವು ಬಗರ್ ಹುಕುಂ ಸಾಗುವಳಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸಮಸ್ಯೆಯಾಗಿರುವುದು ಈ ಸರ್ಕ್ಯುಲರ್‌ನಿಂದ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಪುಟ್ಟಣ್ಣಯ್ಯನವರೇ, ನಾನು ನೇರವಾಗಿ ಸಂಬಂಧಪಟ್ಟ ವಿಷಯಕ್ಕೆ ಬರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಪುಟ್ಟಣ್ಣಯ್ಯನವರೇ, ನಾನು ನೇರವಾಗಿ ಸಂಬಂಧಪಟ್ಟ ವಿಷಯಕ್ಕೆ ಬರುತ್ತೇನೆ. ನಮ್ಮ ಅಧಿಕಾರಿಗಳಿಗೆ ಒಂದು ಸ್ವಭಾವ ಇದೆ. ನಾವು ಈಶ್ವರನನ್ನು ಮಾಡುವುದಕ್ಕೆ ಹೋಗು ಎಂದರೆ, ಈಶ್ವರನ ಅಪ್ಪನನ್ನು ಮಾಡುವುದಕ್ಕೆ ಹೋದಂತಾಯಿತು. ನಮ್ಮ ಉದ್ದೇಶ ಏನು? ಹಿಂದೆ ಕೊಡದೇ ಇರತಕ್ಕಂಥ ಬಡವರಿಗೆ ಕೊಟ್ಟು ಅವರಿಗೆ ಮಂಜೂರು ಮಾಡುವ ಅರ್ಹತೆ ಇದ್ದರೆ, ಮಂಜೂರು ಮಾಡುವಂತೆ ಆರ್ಜಿ ಕೊಟ್ಟದ್ದು ಆಗಿದೆ. ಕಾನೂನು ಇದೆ, ಕಾನೂನನ್ನು ಯಾರು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈಗ ಇರುವ ಕಾನೂನು ಪ್ರಕಾರವಾಗಿ, ಈ ಸರ್ಕ್ಯುಲರ್ ಇದ್ದರೂ ಕೂಡ ಕಾನೂನಿನ ಬಗ್ಗೆ ಪ್ರಜ್ಞೆ ಇರತಕ್ಕಂಥ ಅಧಿಕಾರಿ ತನ್ನ ಪಾಡಿಗೆ ತಾನು ರೆಕಾರ್ಡ್ ಮಾಡುವಂಥದ್ದು ಮಂಜೂರು ಮಾಡುವಂಥದ್ದನ್ನು ಮಾಡಿಕೊಂಡು ಹೋಗಲೇಬೇಕು. ಬುದ್ಧಿ ಇಲ್ಲದವನಿಗೆ ಇಷ್ಟೇ ಸಾಕು, ಸರ್ಕ್ಯುಲರ್ ಈ ರೀತಿ ಇದೆ ಅದನ್ನು ಮಾಡುವುದಕ್ಕಾಗುವುದಿಲ್ಲವೆಂದು ಕುಳಿತುಕೊಂಡು ಬಿಡುತ್ತಾನೆ. ನೀವು ಮಾನ್ಯ ಭೈರೇಗೌಡರು ಬರೆದ ಪತ್ರಕ್ಕೆ ಏನು ವಿವರಣೆಯನ್ನು ಕೊಟ್ಟಿದ್ದೀರಿ, ಈ ಸರ್ಕ್ಯುಲರ್ ಬಗರ್ ಹುಕುಂ ಸಾಗುವಳಿ ಸೆಕ್ಷನ್ 53 ರ ಪ್ರಕಾರ ಕೊಟ್ಟಿದ್ದು ಇದೆ, ಮತ್ತು ಆಶ್ರಯ ಸಮಿತಿಗೆ ಅನ್ವಯಿಸಬಾರದೆಂದು ಒಂದು ಕ್ಲಾರಿಫಿಕೇಷನ್ ಇಷ್ಯು ಮಾಡಿದರೆ ಸಾಕಾಗುತ್ತದೆ.

ಶ್ರೀ ಬಿ.ಸೋಮಶೇಖರ: ಮಾನ್ಯ ಅಧ್ಯಕ್ಷರೆ, ಇನ್ನೊಂದು ಸ್ಪಷ್ಟವಾದ ನಿರ್ದೇಶನವನ್ನು ಇವತ್ತು ನಾಳೆಯೊಳಗಾಗಿ ಕೊಡುತ್ತೇವೆ. ಈ ಸರ್ಕ್ಯುಲರ್‌ಗೂ ಅದಕ್ಕೂ ಸಂಬಂಧವಿಲ್ಲ. ಆ್ಯಕ್ಟ್ ಪ್ರಕಾರ ಏನು ಪ್ರಾವಿಜನ್ ಇದೆ, ಅದರ ಪ್ರಕಾರ ಮಾಡಬೇಕೆಂದು ಕೊಟ್ಟಿದ್ದೇವೆ, ಅದರ ಬಗ್ಗೆ ಗೊಂದಲವನ್ನು ಸೃಷ್ಟಿ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ನಮ್ಮ ಉದ್ದೇಶ ಗೊಂದಲವನ್ನು ಸೃಷ್ಟಿ ಮಾಡಬೇಕೆಂದು ಅಲ್ಲ. ನನ್ನ ವಾದ ಏನೆಂದರೆ ನಾನು ಮೊದಲೇ ಹೇಳಿದ್ದೇನೆ. ಇಲ್ಲಿ

15 ವರ್ಷ ಹಾಗೂ ಲೋಕಸಭೆಯಲ್ಲಿ 10 ವರ್ಷಗಳವರೆಗೆ ಇದ್ದೆ. ಈ ಸದನ ಒಂದು ಕಾನೂನನ್ನು ಪಾಸ್ ಮಾಡುತ್ತದೆ. ನನಗೆ ಏನಾಯಿತೆಂದರೆ, ಮಾನ್ಯ ಸೋಮಶೇಖರ ರವರು ನಾವು ಯಾವ ಸರ್ಕ್ಯೂಲರ್‌ನ್ನು ಕಳುಹಿಸಿರುವುದಿಲ್ಲವೆಂದು ಹೇಳಿಬಿಟ್ಟರು. ನಾನು ಹೊರಗೆ ಹೋದ ತಕ್ಷಣ ಒಂದು ಸರ್ಕ್ಯೂಲರ್ ಕೊಟ್ಟರು ಅದು ಈ ರೀತಿಯಾಗಿದೆ. ಈ ಸರ್ಕ್ಯೂಲರ್ it amounts to contempt of the House. ಈ ಸರ್ಕ್ಯೂಲರ್ ಅವರು ಹೇಳಿರುವ ಹಿನ್ನಲೆಯಲ್ಲಿ, ಮಾನ್ಯ ಸೋಮಶೇಖರವರು ಕಳಿಸಿಯೇ ಇಲ್ಲವೆಂದು ಹೇಳಿದರು. ಕಳುಹಿಸಿಕೊಟ್ಟಿದ್ದಾರೆ, ಇದನ್ನು ಹೇಗೆ ಮಾಡುವುದು, how to tolerate all these things? ಈ ಸಭೆಯ ಘನತೆ ಹಾಗೂ ಈ ಸಭೆಯ ಸಾರ್ವಭೌಮತ್ವ ಉಳಿದುಕೊಳ್ಳಬೇಡವೇ. ಇದು ನಾನು ಇಟ್ಟಂತಹ ಸಮಸ್ಯೆ. ಉಳಿದಿದ್ದು ಅವರು ಏನು ಮಾಡುತ್ತಾರೋ ಅದು ನನಗೆ ಮುಖ್ಯವಲ್ಲ. ಇಂತಹ ಸರ್ಕ್ಯೂಲರ್‌ನ್ನು ಕಳುಹಿಸಿದ ಮೇಲೆ, ಕಳುಹಿಸಿಲ್ಲವೆಂದು ಹೇಳಿದ ಮೇಲೆ ಅದು ಕಂಟೆಂಪ್ಟ್ ಆಫ್‌ಹೌಸ್ ಆಗುತ್ತದೋ ಇಲ್ಲವೋ? ಲಿಮಿಟೆಡ್ ಕ್ವೊಶ್ಚನ್, ಇದನ್ನು ನಾನು ಮಾನ್ಯ ಅಧ್ಯಕ್ಷರಿಗೆ ಬಿಡುತ್ತೇನೆ. ಈ ತರಹ ಆಗಬಾರದು. ಮಂತ್ರಿಗಳು ಏನೋ ಹೇಳುವುದು, ಅಲ್ಲಿ ಒಂದು ಸರ್ಕ್ಯೂಲರ್ ಕಳುಹಿಸುವುದು, ಇಲ್ಲಿ ಕಳುಹಿಸಿರುವುದಲ್ಲವೆಂದು ಹೇಳುವುದು, ಇದು ಸರಿಯಾದುದು ಅಲ್ಲ. ಇದನ್ನು ನಾನು ನಿಮ್ಮ ತೀರ್ಮಾನಕ್ಕೆ ಬಿಡುತ್ತೇನೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ದಿನಾಂಕ: 14-06-99ರಂದು ಸ್ಪಷ್ಟೀಕರಣವನ್ನು ಕೊಟ್ಟ ಮೇಲೆ ಇಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ, ನೀವು ಸೆಕ್ಷನ್ 94(ಬಿ) ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಅರ್ಥ. ಇದಾದ ಮೇಲೆ ಇತ್ತೀಚೆಗೆ ಯಾವುದೇ ಸುತ್ತೋಲೆಯನ್ನು ಕಳುಹಿಸಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ತಾವು ಈ ಮಾತನ್ನು ಬೆಳಿಗ್ಗೆಯೇ ಸದನದಲ್ಲಿ ಹೇಳಬೇಕಾಗಿತ್ತು. ದಿನಾಂಕ: 23-5-99ರಂದು ಆ ರೀತಿ ಸರ್ಕ್ಯೂಲರ್‌ನ್ನು ಕಳುಹಿಸಿರುವುದು ನಿಜ, ಇದಾದ ಮೇಲೆ ಇನ್ನೊಂದು ಸುತ್ತೋಲೆಯು ಹೋಗಿದೆ ಎಂದು ಹೇಳಿಲ್ಲ.

ಅಧ್ಯಕ್ಷರು: ಈ ಸಮಸ್ಯೆ ಸದನದಲ್ಲಿ ಚರ್ಚೆಗೆ ಹೇಗೆ ಪ್ರಾರಂಭವಾಯಿತು? ಮಾನ್ಯ ಆರಗಜ್ಞಾನೇಂದ್ರರವರು ಶೂನ್ಯವೇಳೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಈ ತರಹ ಆಗಿದೆ, ನಾವೆಲ್ಲಾ ಸದನದಲ್ಲಿ ಅನುಮೋದನೆ ಕೊಟ್ಟರೂ ಕೂಡ ಒಂದು ರೆಕಾರ್ಡ್ ಬಿಲ್ಡ್ ಅಪ್ ಆಗಿಲ್ಲ. ಈ ಸೌಭಾಗ್ಯಕ್ಕೆ ಸದನ ಏಕೆ ಇರಬೇಕಿತ್ತು ಎಂದು ಸ್ವಲ್ಪ ಎನ್‌ರೇಜ್ ಆಗಿ ಅವರು ಹೇಳಿದರು. promptly the minister replied. He said. ನಾವು ಯಾವುದಕ್ಕೂ ಅಡ್ಡಬಂದಿಲ್ಲ, ಅತರಹದ ಸರ್ಕ್ಯೂಲರ್‌ಗಳನ್ನು ಯಾವುದನ್ನು ಕಳುಹಿಸಿಲ್ಲ. ಮಾನ್ಯ ನಂಜೇಗೌಡರು ಹೊರಗಡೆಯಿಂದ ಬಂದನಂತರ

ಒಂದು ಸರ್ಕ್ಯುಲರ್‌ನ್ನು ಹಿಡಿದುಕೊಂಡು ಬಂದು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. so events have gone. ಮುದ್ದಹನುಮೇಗೌಡರು ಹೇಳಿದಂತೆ what compelled the government to circulate such a message to the officers? ಬೆಳಿಗ್ಗೆ ಮಂತ್ರಿಗಳೇ ಹೇಳುತ್ತಿದ್ದರು unfortunately promotee Tahsildars ಅವರಿಗೆಲ್ಲಾ ಸರ್ಕ್ಯುಲರ್ ಸುಪ್ರೀಂ ಅಲ್ಲ, ಆ್ಯಕ್ಟ್ ಸುಪ್ರೀಂ ಎಂದು ತಿಳಿದಿರುತ್ತದೆಂದು ನನಗೆ ನಂಬಿಕೆ ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಆ್ಯಕ್ಟ್ ಸುಪ್ರೀಂ ಎಂದು ತಿಳಿದುಕೊಂಡು ಅವನು ನಟನೆ ಮಾಡಲು ಹೋದರೆ ಒದ್ದು ಅವನನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಇದು ಒಳ್ಳೆಯ ಕಥೆಯಾಯಿತಲ್ಲ.

ಅಧ್ಯಕ್ಷರು: ಇರಲಿ, he has brought up and clarified the position of the government. ನಮಗೆ ಯಾವ ಅಮೆಂಡ್‌ಮೆಂಟ್‌ನ್ನು ತಂದಿದ್ದೇವೆ, ಟೈಮ್ ಎಕ್ಸ್‌ಟೆಂಡ್ ಮಾಡಿ ರೆಕಾರ್ಡ್ಸ್ ಬಿಲ್ಡ್‌ಅಪ್ ಮಾಡಿ ಅದನ್ನು ಸ್ಕಟಲ್ ಮಾಡುವಂತಹ ಉದ್ದೇಶ ನಮಗಿಲ್ಲವೆಂದು ಹೇಳಿದ್ದಾರೆ.

4.00 ಪಿಎಂ

I think that should solve the problem. ಆ ಸರ್ಕುಲರ್‌ನ್ನು ಕಳುಹಿಸಿರುವುದರಿಂದ ಉದ್ಭವವಾಗಿದ್ದಂತಹ ಗೊಂದಲವು ಕೂಡ ಈಗ ನಿವಾರಣೆಯಾಗಿದೆ.

ಶ್ರೀ ಬಿ.ಸೋಮಶೇಖರ್: ಇದರ ಬಗ್ಗೆ ನನ್ನ ಅರ್ಥ ಏನಿತ್ತು ಎಂದರೆ ದಿನಾಂಕ: 14-6-99ರಂದು ಈ ರೀತಿಯಾಗಿ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ತಾವು ದಯಮಾಡಿ ಕುಳಿತುಕೊಳ್ಳಿ. ನೀವು ಹೇಳಿರುವುದು ಸರಿಯಾಗಿದೆ ಸೆಕ್ಷನ್ 94ನ್ನು ತೆಗೆದು ಓದಿ ಒರಿಜಿನಲನ್ನು ತೆಗೆದು ನೋಡಿ ಗೋಮಾಳ ಲ್ಯಾಂಡ್ಸ್‌ನ್ನು ಒತ್ತುವರಿ ಮಾಡಿದರೂ ಕೂಡ ಅದನ್ನು ಇದರ ಕೆಳಗಡೆ ಮಂಜೂರಾತಿಯನ್ನು ಮಾಡಿಕೊಡುವುದಕ್ಕೆ ಅವಕಾಶವಿದೆ. ಒಂದು ಜನರಲ್ ಸರ್ಕ್ಯುಲರ್‌ನ್ನು ಗೋಮಾಳ ಲ್ಯಾಂಡ್ಸ್‌ಗೆಂದು ಕಳುಹಿಸಿದಾಗ ನಿಮ್ಮ ಅಧಿಕಾರಿಗಳು ಗೋಮಾಳ ಲ್ಯಾಂಡ್ಸ್‌ಗೆ ಸಂಬಂಧಪಟ್ಟಿದ್ದನ್ನು ಹಿಡಿದಿಟ್ಟುಕೊಂಡು ಬಿಡುತ್ತಾರೆ. ಅದರಿಂದಾಗಿಯೇ ಈ ವಿಚಾರವು ಇಲ್ಲಿ ಪ್ರಸ್ತಾಪಕ್ಕೆ ಬಂದಿತು. ಇಲ್ಲಿ ಗೊಂದಲವು ಉಂಟಾಗಿರುವುದು ಸದಸ್ಯರ ಕಡೆಯಿಂದಲ್ಲ, ಸರ್ಕಾರದ ಸುತ್ತೋಲೆ ಕಡೆಯಿಂದ ಉಂಟಾಗಿದೆ. ದಯಮಾಡಿ

ಇದರಲ್ಲಿ ಯಾರು ಪ್ರತಿಷ್ಠೆಯನ್ನು ತೋರಿಸುವುದು ಬೇಡ, ಇದು ಬಡವರ ಹಿತ, ಸಾರ್ವಜನಿಕರ ಹಿತ ದಯಮಾಡಿ ಈ ಸರ್ಕ್ಯುಲರ್‌ನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಲ್ಲವೂ ಸರಿಸೋಗುತ್ತದೆ. Let us close this matter here. ನಾನು ತಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುವಂತಹ ಸನ್ನಿವೇಶದಲ್ಲಿ ತಮ್ಮ ನಿಜವಾದ ಉದ್ದೇಶ ಏನಿತ್ತು ಎಂದು ಸ್ಪಷ್ಟಪಡಿಸಿರುವುದರಂದ ಅವರಿಗೆ ಸದನವನ್ನು ಅಗೌರವದಿಂದ ಕಾಣಬೇಕು ಅಥವಾ ಸದನವು ಪಾಸು ಮಾಡಿಕೊಟ್ಟಿರತಕ್ಕಂಥ ಮಸೂದೆಯನ್ನು ಅಲ್ಲಗಳೆಯಬೇಕು. ಎಂದು ಅವರ ಅಭಿಪ್ರಾಯವಲ್ಲ. ಅವರೂ ಕೂಡ ಈ ಕೆಲಸವನ್ನು ಮಾಡಿಕೊಡಬೇಕೆಂಬ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವುದರಿಂದ I appeal to you to kindly drop this matter here. I think the Minister may kindly withdraw this circular. That should do sufficient good to the people of karnataka. ಆ ಸರ್ಕ್ಯುಲರ್‌ನ್ನು ವಿತ್ ಡ್ರಾಮಾಡಿಕೊಳ್ಳಿ.

ಶ್ರೀ ಬಿ.ಸೋಮಶೇಖರ್: ಆ ಸರ್ಕ್ಯುಲರ್‌ನಿಂದ ಕೆಲವು ಅಧಿಕಾರಿಗಳು ಮಿಸ್ ಇಂಟರ್‌ಪ್ರಿಟೇಷನ್ ಮಾಡುತ್ತಿದ್ದಾರೆಂದು ಗೊತ್ತಾದ ಮೇಲೆ ಸ್ಪಷ್ಟವಾದ ಒಂದು ನಿರ್ದೇಶನವನ್ನು ದಿನಾಂಕ: 14-6-99ರಂದು ಅಂದರೆ ಸುಮಾರು 15 ದಿವಸಗಳ ಹಿಂದೆ ಕಳುಹಿಸಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತಾವು ಬೆಳಿಗ್ಗೆ ಇದನ್ನು ಕ್ಲಾರಿಫೈ ಮಾಡಿದ್ದರೆ ಮುಗಿದುಹೋಗುತ್ತಿತ್ತು.

ಅಧ್ಯಕ್ಷರು: ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಸತ್ತು ಹೋಗಿರುವ ಹಾವನ್ನು ಬಿಸಾಕಿದ್ದೇವೆ.

Sri B.Somashekhar : That circular automatically goes in view of this order

Mr. Speaker : Please with draw that circular

ಶ್ರೀ ಬಿ.ಸೋಮಶೇಖರ್: ಆಯಿತು.

ಶ್ರೀ ಹೆಚ್.ಎನ್.ನಂಜೇಗೌಡ: ಸರ್ಕ್ಯುಲರ್‌ನ್ನು ವಿತ್ ಡ್ರಾ ಮಾಡಿಕೊಳ್ಳಲು ಹೇಳಿ.

Mr. Speaker : Thank you very much.